ಬಲದಿಂದಲೇ ಮನೆಯಲ್ಲಿ ಈ ಕಲಹವಿದೆ..ಆದರೆ ಆ ಕಲಹಕ್ಕೆ ಕಾರಣ ಏನೆಂಬುದನು ಮಾತ್ರ ತನಗೆ ತಿಳಿಯದು..! ರಾಯರು ಹೇಳಿದಂತೆ ಮೊದಲೇ ಕಳ್ಳ..ಏನಾದರೂ ಹೆಚ್ಚು ಕಮ್ಮಿ ಮಾಡಿದರೆ ಏನು ಮಾಡುವುದು..? ಆ ಭಯ ಅವಳನ್ನು ಒಳಗೇ ಕೂರಲು ಬಿಡದೇ ಮೆಲ್ಲನೆ ಎದ್ದು ಹೊರಗೆ ಬಂದು ಬಾಗಿಲಲ್ಲಿ ನಿಂತಳು.

ವಿಜಯಮ್ಮ, ಪ್ರಭಾಕರ ರಾಯರ ಮುಂದೆ ನಿಂತು ಗೋಗರೆಯುತ್ತಿದ್ದರು. 'ಈ ಸಲ ನೀವು ನನ್ಮಾತು ನಡೆಸಿಕೊಡಲೇ ಬೇಕು..ನಾನು ಇಷ್ಟು ದಿನ ನಿಮ್ಹತ್ರ ಏನೂ ಕೇಳಲಿಲ್ಲ..ನಿಮ್ಮ ಹತ್ರ ಕೈ ಮುಗಿದು ಬೇಡ್ತೀನಿ..ಇದೊಂದು ಸಲ ನೀವು ನನ್ಮಾತಿಗೆ ಬೆಲೆ ಕೊಡಿ..' ಪ್ರಭಾಕರ ರಾಯರು ಅವರ ಮಾತುಗಳು ತಮಗೆ ಒಪ್ಪಿಗೆ ಆಗಲಿಲ್ಲವೆಂಬಂತೆ, ಒಂದಿನಿತೂ ಪ್ರತಿಕ್ರಿಯೆ ನೀಡದೆ ಭಾವರಹಿತ ಶಿಲೆಯಂತೆ ನಿಂತಿದ್ದರು.

'ಅವನು..ಹೇಗೂ ನಾಳೆ ಹೋಗ್ತಾನಂತಲ್ವಾ..? ಇವತ್ತು ಒಂದು ದಿನದ ಮಾತು ತಾನೇ..? ಅವನನ್ನು ಕಂಡರೆ ಯಾಕೆ ಶತ್ರುವಿನ ಥರ ಆಡ್ತೀರಾ..? ಅವನ ನೆರಳು ಕಂಡರೂ ಆಗದವನ ಥರ ವರ್ತಿಸ್ತೀರಾ..? ಇವತ್ತೊಂದು ದಿನ ಅವನನ್ನು ಇಲ್ಲಿರೋಕೆ ಬಿಡಿ..ನಿಮ್ಗೆ ದಮ್ಮಯ್ಯ ಅಂತೀನಿ..ಬೆಳಗೆದ್ದು ಅವನು ನಿಮಗೆ ತನ್ನ ಮುಖ ತೋರಿಸಲ್ಲ..ಸರೀನಾ..?' ಆಗಲೂ ರಾಯರು ಒಂದಿನಿತೂ ಮಿಸುಕಾಡಲಿಲ್ಲ. ವಿಜಯಮ್ಮ ಪಶ್ಚಾತ್ತಾಪ ಭಾವದಿಂದ, 'ಜೀವನದುದ್ದಕ್ಕೂ ಬರೀ ನಿಮ್ಮ ಮಾತು, ಆಜ್ಞೆ ಪಾಲಿಸುವುದೇ ಆಗಿಹೋಯ್ತು..ನಿಮ್ಮ ಮಾತುಗಳಿಗೆ ಬೆಲೆ ಕೊಡುವ ಸಲುವಾಗಿ ನನ್ನ ಎಷ್ಟೋ ಆಸೆಗಳನ್ನು ಬಲಿ ಕೊಡ್ತಾ ಬಂದಿದ್ದೀನಿ..ನಾನೂ ನಿಮ್ಮ ಹಾಗೆ ಮನುಷ್ಯಳು ಅಂತ ನೀವು ಯಾವತ್ತಾದರೂ ಅರ್ಥ ಮಾಡಿಕೊಂಡಿದ್ದೀರಾ..? ನನ್ನ ಒಂದೇ ಒಂದು ಬೇಡಿಕೆಗೂ ನಿಮ್ಮ ಸಮ್ಮತಿ ಇಲ್ವಾ..?'

ಪತ್ನಿಯ ಅಸಹಾಯಕ ಕೋರಿಕೆಗೆ ರಾಯರು ಕಡೆಗೂ ಮಣಿಯಲೇ ಬೇಕಾಯಿತು.

'ನಿನ್ನಿಷ್ಟ ಬಂದ ಹಾಗೆ ಮಾಡಿಕೋ..ಅವ್ನು ನಿನ್ಮೇಲೆ ಸವಾರಿ ಮಾಡ್ದೇ ಇದ್ರೆ ಆಮೇಲೆ ಕೇಳು. ಹಾವಿಗೆ ಹಾಲು ಎರೀತಾ ಇದ್ದೀಯಾ. ಅದು ಕಚ್ಚದೇ ಇರಲ್ಲ. ಇಷ್ಟು ವರ್ಷಗಳಲ್ಲಿ ಅವನಲ್ಲಿ ಏನಾದ್ರೂ ಬದಲಾವಣೆ ಬಂದಿದ್ಯಾ ಹೇಳು? ಈಗ್ಲೂ ನೀನು ಕುರುಡಳ ಥರ ಇದ್ರೆ ಅದು ನಿನ್ನ ದುರದೃಷ್ಟವೇ ಸರಿ..!'

ಪ್ರಭಾಕರರಾಯರು ದುರ್ದಾನ ತೆಗೆದುಕೊಂಡವರಂತೆ ಅಲ್ಲಿಂದ ತಮ್ಮ ಕೋಣೆಗೆ ನಡೆದರು. ಪತಿಯ ಅರೆ ಸಮ್ಮತಿಗೆ ವಿಜಯಮ್ಮ ಹಿಗ್ಗಿದರು. ಹೇಗೋ ವಿಚಿತ್ರವಾಗಿ ಸೋಫಾದ ಮೇಲೆ ಅರ್ಧ ಮೈ ಚೆಲ್ಲಿ ಮಲಗಿದಂತಿದ್ದ ಅವನೆಡೆಗೆ ನೋಡುತ್ತ,'ಅವ್ರ ಮಾತು ಒರಟು..ಆದ್ರೆ ಹೃದಯ ಮೃದು ಕಣೋ ಸೂರ್ಯ. ಅವ್ರ ಮಾತಿಗೆ ನೊಂದುಕೊಳ್ಳಬೇಡ. ಮಗನ ಬಗ್ಗೆ ತಂದೆಗೆ ಮಮಕಾರ ಇರದೇ ಇರುತ್ತಾ ಹೇಳು?' ವಿಜಯಮ್ಮನ ಮಾತುಗಳನ್ನು ತನ್ನ ಕೋಣೆಯ ಬಾಗಿಲಲ್ಲಿ ನಿಂತು ಆಲಿಸುತ್ತಿದ್ದ ಅಪೂರ್ವ ದಿಗ್ಭ್ರಾಂತಳಾದಳು. 'ಈತ ..ಈ ಮನೆಯ ಮಗನೇ? ಈತ ಯಾರೋ ಅಪರಿಚಿತನಲ್ಲ. ಈ ದಂಪತಿಯ ಮಗ! ಹಾಗಾದರೆ ಇಷ್ಟು ದಿನಗಳು ಇವನು ಎಲ್ಲಿದ್ದ..?'

**ಅಧ್ಯಾಯ 4**

'ನಿನ್ನ ಅವಸ್ಥೆ ನೋಡಿಕೊಂಡಿದ್ದೀಯಾ..ಹೇಗೆ ಆಗಿ ಹೋಗಿದ್ದೀಯಾಂತ..! ದೇವಸ್ಥಾನದ ಮೆಟ್ಟಿಲಲ್ಲಿ ಆ ಭಿಕ್ಷುಕರ ಜೊತೆ ನಿನ್ನನ್ನು ನೋಡಿ ನನ್ನ ಹೊಟ್ಟೆಗೆ ಚೂರೀಲಿ ಇರಿದಂತಾಯಿತು ಗೊತ್ತಾ..? ನೀನು ನೇರವಾಗಿ ಇಲ್ಲಿಗೇ ಬರಬಾರದಿತ್ತೇನು? ಈ ಕೂದ್ಲು ನೋಡು ..ನಿನ್ಮುಖ ನೋಡ್ಲಿಕ್ಕಾಗ್ತಾ ಇಲ್ಲ ನನ್ಕೈಲಿ..! ಆರೈಕೆನೇ ಇಲ್ದೇ ತುಂಬಾ ಸೊರಗಿ ಹೋಗಿದ್ಯಪ್ಪಾ.. ಹೇಗೂ ಬಂದಿದ್ದೀಯಾ..ನಮ್ಮನ್ನು ಬಿಟ್ಟು ಇನ್ನೆಲ್ಲಿಗೂ ಹೋಗ್ಬೇಡ..ಇಲ್ಲೇ ಇದೇ ಮನೇಲಿ..ನಮ್ಜೊತೆನೇ ಇರ್ಬೇಕು ನೀನು!' ತಾಕೀತು ಮಾಡುವಂತೆ ತೋರು ಬೆರಳು ತೋರಿಸುತ್ತ ನುಡಿದರು. ಅಪೂರ್ವ ಉಸಿರಾಡುವುದನ್ನೇ ಮರೆತವಳಂತೆ ಇದನ್ನೆಲ್ಲ ನೋಡುತ್ತಾ ನಿಂತಿದ್ದಳು.

ಸೂರ್ಯ ಅನುಮಾನಿಸುತ್ತ, 'ನಿನ್ನ ಗಂಡ ಅದಕ್ಕೆ ಒಪ್ಪಬೇಕಲ್ವಾ? ಎಷ್ಟಾದರೂ ನರಸಿಂಹನ ವಂಶದವನು. ನಿನ್ನನ್ನು ಅಡ್ಡಡ್ಡ ಸಿಗಿದು ಹಾಕಿ ಬಿಡ್ತಾನಷ್ಟೇ' ಉಡಾಫೆಯ ನಗೆ ನಕ್ಕ.

'ಅವ್ರ ಬಗ್ಗೆ ಹಾಗೆಲ್ಲಾ ಹಗುರವಾಗಿ ಮಾತನಾಡಬೇಡ್ವೋ..ಎಷ್ಟಾದರೂ ಅವ್ರು ನಿನ್ಗೆ ಅಪ್ಪ..ನಿನ್ನನ್ನು ದೂರ ಮಾಡ್ಕೊಂಡು ನಾವಿಬ್ರೂ ಎಷ್ಟೊಂದು ನೋವು, ಸಂಕಟ ಅನುಭವಿಸಿದ್ದೀವಿ..ಅದು ನಮ್ಗೆ ಮಾತ್ರ ಗೊತ್ತು ಆ ನೋವು.. ಈ ಸಂಕಟ ನಮ್ಮ ಶತ್ರುವಿಗೂ ಬೇಡವಪ್ಪ' ಅವರ ದನಿ ಆರ್ದ್ರವಾಯಿತು. ವಿಜಯಮ್ಮನಿಗೆ ಮಗ ಮರಳಿ ಮನೆಗೆ ಬಂದದ್ದು, ಕಳೆದು ಹೋದ ನಿಧಿ ಸಿಕ್ಕಂತಾಗಿತ್ತು. ಅವರಲ್ಲಿ ಎಂದೂ ಇಲ್ಲದ ಲವಲವಿಕೆ, ಹುರುಪು ಮೂಡಿತು. 'ಅಪೂರ್ವ..ಬಾ..ಇಲ್ಲಿ..ನನ್ಗೆ ಸಹಾಯ ಮಾಡು..ಇವತ್ತು ಹಬ್ಬದಡಿಗೆ ಮಾಡ್ಬೇಕು.. ಎಷ್ಟೋ ವರ್ಷಗಳ ನಂತರ ನನ್ನ ಮಗ ಮನೆಗೆ ಬಂದಿದ್ದಾನೆ.. ನೀನು ಆವಾಗಾವಾಗ ಕೇಳ್ತಿದ್ಯಲ್ವಾ..ನಿಮ್ಮ ಚಿಂತೆಗೆ ಏನು ಕಾರಣ ಅಂತ.. ಇವತ್ತು ನಿನ್ಗೆ ಉತ್ತರ ಸಿಕ್ತು ಅಂದುಕೋ..!'

ಅಪೂರ್ವ ಅವರು ಸ್ವಲ್ಪ ಹೊತ್ತಿನ ಮುಂಚೆ ಆಡಿದ ಮಾತುಗಳನ್ನು ಮರೆತಿರಲಿಲ್ಲ. ಅವಳು ಒಂದೂ ಮಾತನಾಡದೆ ಮೌನವಾಗಿ ಅವರು ಹೇಳಿದ ಕೆಲಸಗಳನ್ನು ಮಾಡುತ್ತ ಸಹಕರಿಸಿದಳು. 'ಅವ್ನಿಗೆ ಏನು ಇಷ್ಟ ಅಂತ ಒಂದೂ ಗೊತ್ತಿಲ್ಲ ನನ್ಗೆ.. ನನ್ನಿಂದ ದೂರನೇ ಇದ್ದು ಬೆಳೆದ್ನಲ್ವಾ..ಹಾಗಾಗಿ..ಅವ್ನು ಇದ್ದೂ ಇಲ್ಲದಂತೆ ಆಗಿತ್ತು ನನ್ಗೆ..ಸದ್ಯ ಸಿಕ್ಕಿದ್ನಲ್ವಾ..ಆ ಭಟ್ಟರು ಪ್ರಾರ್ಥಿಸಿ ಪ್ರಸಾದ ಕೊಟ್ರಲ್ವಾ..ಇಷ್ಟು ಬೇಗ ಫಲಿಸುತ್ತೇಂತ ನಾನು ಭಾವಿಸಿರಲಿಲ್ಲ..!' ವಿಜಯಮ್ಮನ ಸಂಭ್ರಮದ ಭರದಲ್ಲಿ ಅವರ ಮಾತುಗಳು ಒಡ್ಡು ಒಡೆದ ಅಣೆಕಟ್ಟಿನಂತೆ, ಲಹರಿಯಾಗಿ ಪ್ರವಹಿಸುತ್ತಲೇ ಇತ್ತು. ದೀರ್ಘ ಮಾತಿನ ನಂತರವಷ್ಟೇ ಅಪೂರ್ವಳ ಮೌನ ಅವರ ಗಮನಕ್ಕೆ ಬಂದಿತ್ತು.

'ಅಪೂರ್ವ..ಯಾಕೆ ಸಪ್ಪಗಿದ್ದೀಯಾ..ಏನಾಯ್ತು..?' ಎಂದವರು ತಕ್ಷಣವೇ ತಾವು ಆಕೆಯನ್ನು ಗದರಿದ್ದು ನೆನಪಾಗಿ, 'ಅಪೂರ್ವ..ಕೋಪದಲ್ಲಿ ಏನೋ ಅಂದ್ಬಿಟ್ಟೆ.. ನನ್ನ ಕ್ಷಮಿಸಿ ಬಿಡಮ್ಮಾ..!' ಎಂದು ಅವಳ ತಲೆ ದಡವುತ್ತ ಕೋರಿದರು.

ಅಪೂರ್ವಳ ಮನಸ್ಸು ನೊಂದಿದ್ದರೂ ಅವರೆದುರು ಅದನ್ನು ತೋರ್ಪಡಿಸದೆ 'ಛೆ..ಛೇ..ಹಾಗೇನಿಲ್ಲ ಆಂಟಿ. ನೀವು ಹಿರಿಯರು..ಕ್ಷಮೆ ಕೇಳಬಾರದು..ಅಷ್ಟಕ್ಕೂ ನನ್ನದೇ ತಪ್ಪು..ನನ್ನ ಇತಿಮಿತಿ ಅರಿತು ನಾನು ವರ್ತಿಸಬೇಕಿತ್ತು..ಸಲುಗೆ ವಹಿಸಿ ಮಾತನಾಡಿದ್ದು ನನ್ನದೇ ತಪ್ಪು..' ಅಷ್ಟು ಹೇಳುವಷ್ಟರಲ್ಲಿ ಅವಳ ಹೃದಯ ಭಾರವಾಗಿ ಕಂಗಳು ತುಂಬಿ ಬಂದಿತ್ತು.

'ಹಾಗಲ್ವೇ ಅಪೂರ್ವ..' ವಿಜಯಮ್ಮನಿಗೆ ಆಕೆಗೆ ಹೇಗೆ ಸಂತೈಸಬೇಕೆಂದೇ ತೋಚಲಿಲ್ಲ.

'ನೀವು ನನ್ನನ್ನು ಕ್ಷಮಿಸಬೇಕು ಆಂಟಿ. ಆತ ನಿಮ್ಮ ಮಗ ಎಂಬುದು ನನಗೆ ಗೊತ್ತಿರಲಿಲ್ಲ. ಹಾಗಾಗಿ ಹೊರಗಿನವರು ಯಾರೋ ಮನೆಯೊಳಗೆ ಹೊಕ್ಕು ರಾದ್ಧಾಂತ ಮಾಡುತ್ತಿದ್ದಾರೆ ಎಂದು ಅಂಜಿ ಪೋಲೀಸ್‌ಗೆ ತಿಳಿಸಿ ಅಂತ ಹೇಳಿದೆ. ನಾನು ಈ ಮನೆಗೆ ಬಂದು ಮೂರು ವರ್ಷಗಳು ಕಳೆದವು. ಎಂದೂ ನೀವು ಅವರ ಪ್ರಸ್ತಾಪ ಮಾಡಿದ್ದು ನಾನು ಕೇಳಿಲ್ಲ. ಆತ ಕೂಡಾ ಎಂದೂ ಈ ಮನೆಗೆ ಬಂದಿರಲಿಲ್ಲ. ಹಾಗಾಗಿ ನನಗೆ ಸತ್ಯ ತಿಳಿದಿರಲಿಲ್ಲ. ಗೊತ್ತಿರದೇ ಮಾತನಾಡಿದ್ದಕ್ಕೆ ದಯವಿಟ್ಟು ಕ್ಷಮಿಸಿ.' ಅಪೂರ್ವಳ ಕೈ ಮುಗಿದು ಕ್ಷಮೆ ಕೋರಿದಳು.

'ಹೋಗ್ಲಿ ಬಿಡು..ಆಗಿದ್ದು ಆಗಿ ಹೋಯ್ತು..ಆಗ ಪರಿಸ್ಥಿತಿಯೂ ಸರಿ ಇರಲಿಲ್ಲ.. ನಾನೂ ದುಡುಕಿ ನಿನ್ನ ಮನಸ್ಸನ್ನು ನೋಯಿಸಿಬಿಟ್ಟೆ'

ಇಬ್ಬರ ಮನಸ್ಸಿನ ಕಹಿಯೂ ಅಳಿಸಿ ಹೋಗಿತ್ತು.ಅಡುಗೆ ಸಿದ್ಧತೆ ಮುಗಿಸಿ ವಿಜಯಮ್ಮ ಮಗನ ಬಳಿ ಮಾತನಾಡಲು ಕುಳಿತಾಗ ಸೂರ್ಯ, ಅಪೂರ್ವಳನ್ನು ಉದ್ದೇಶಿಸಿ ವಿಚಾರಿಸಿದ್ದ, 'ಯಾರಮ್ಮಾ..ಆ ಹುಡ್ಗೀ..ಈ ಮನೇಲಿ ಯಾಕೆ ಇದ್ದಾಳೆ?'

ಅವನ ಪ್ರಶ್ನೆ ಅಪ್ರಯತ್ನವಾಗಿ ಅಪೂರ್ವಳ ಕಿವಿಗೂ ಬಿದ್ದಿತ್ತು.

'ಅವ್ಳು ಇಂಜಿನಿಯರಿಂಗ್ ಕಲೀತಿದ್ದಾಳೆ.. ಇನ್ನೆರಡು ವರ್ಷ ಇಲ್ಲಿರ್ತಾಳೆ. ನಿನ್ನಂದೆ ಪರಿಚಿತರ ಹುಡ್ಗಿ. ಅವ್ಳಿಗೆ ತಂದೆ ತಾಯಿ ಯಾರೂ ಇಲ್ಲ. ಆದರೆ ಕಲಿಯಲು ತುಂಬಾ ಬುದ್ಧಿವಂತೆ.'

'ಅನಾಥರ ಬಗ್ಗೆ ಅಪ್ಪನಿಗೆ ಅನುಕಂಪ ಇದೆ..ಯಾರು ಯಾರನ್ನೋ ತಂದಿಟ್ಕೊಂಡು ಸಾಕ್ತಾರೆ. ಆದ್ರೆ ಸ್ವಂತ ಮಗ ಬೀದೀಲಿ ಬಿದ್ದಿದ್ರೂ ಕೇಳೋದಿಲ್ಲ. ವಿಚಿತ್ರ ಅಲ್ವಾ..?' ಅವನು ನೋವಿನ ನಗೆ ನಕ್ಕು ನುಡಿದ. ಆದರೆ ಅವನ ಮಾತುಗಳನ್ನು ಆಲಿಸಿದ ಅಪೂರ್ವಳಿಗೆ, ಆತ ತನ್ನನ್ನು ಅನಾಥಳೆಂದು ಆಡಿಕೊಂಡಿದ್ದು ಮಾತ್ರ ಮನಸ್ಸಿಗೆ ಹಿಂಸೆಯಾಗಿತ್ತು. ಇಷ್ಟು ದಿನಗಳಿಗೆ ಆ ನೋವು ಅವಳನ್ನು ಕಾಡುತ್ತಿತ್ತಾದರೂ ಯಾರೂ, ಎಂದೂ ಅವಳನ್ನು ನೇರವಾಗಿ ಹಾಗೆ ಆಡಿಕೊಂಡಿರಲಿಲ್ಲ. ಮೊದಲ ಬಾರಿಗೆ ಅಪೂರ್ವಳ ಮನಸ್ಸು ರೆಕ್ಕೆ ಮುರಿದ ಹಕ್ಕಿಯಂತೆ ವಿಲವಿಲನೇ ಒದ್ದಾಡಿತ್ತು. ತನಗೂ ಹೆತ್ತವರೆಂದು ಇದ್ದಿದ್ದರೆ ಹೀಗೆ ಯಾರದ್ದೋ ಮನೆಯಲ್ಲಿ ಈ ರೀತಿ ಅನ್ನಿಸಿಕೊಳ್ಳುವ ಪ್ರಸಂಗ